

# ಟೀವಿ–ಸಿನಿಮಾ ವ್ಯತ್ಯಾಸ ಹೆಚ್ಚು

**ಶಿಶಿರ್ ಶಾಸ್ತ್ರಿ**
**ಉದಯದ 'ಸೇವಂತಿ'ಯ ಅರ್ಜುನ್**

◆ **ನಟನೆಯ ಆಸಕ್ತಿ ಮೂಡಿದ್ದು ಹೇಗೆ?**

ಮೂಲತಃ ಭರತನಾಟ್ಯ ಡಾನ್ಸರ್, ಅದನ್ನೇ ವೃತ್ತಿಯಾಗಿ ತೆಗೆದುಕೊಳ್ಳಬೇಕು ಎನ್ನುವ ಸಂಕಲ್ಪ ನನ್ನದಾಗಿತ್ತು. ಪದವಿ ಓದುವಾಗಲೇ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿ ಮಾಡಿದ್ದೆ. ಅಲ್ಲಿಗೆ ಸೀರಿಯಲ್ ಮ್ಯಾನೇಜರ್ ಒಬ್ಬರು ಬೇರೆ ಕೆಲಸದ ನಿಮಿತ್ತ ಬಂದಿದ್ದರು. ನನ್ನನ್ನು ನೋಡಿ ಹೊಸ ಧಾರಾವಾಹಿಗೆ ಆಡಿಷನ್ ನಡೆಯುತ್ತಿದೆ. ಒಮ್ಮೆ ಭಾಗವಹಿಸಿ ಆಸಕ್ತಿ ಇದ್ದರೆ ಮುಂದುವರಿಸಿ ಇಲ್ಲದಿದ್ದರೆ ಬಿಟ್ಟುಬಿಡಿ ಎಂದು ಹೇಳಿದರು. ಅದು ತೀರಾ ಆಕಸ್ಮಿಕ ಆಗಿದ್ದರಿಂದ ಯೋಚಿಸಬೇಕಿತ್ತು. ಸ್ನೇಹಿತರು ಮತ್ತು ಪೋಷಕರ ಜೊತೆ ಚರ್ಚಿಸಿದ ನಂತರ ಆಡಿಷನ್ ನೀಡುವ ಮನಸ್ಸು ಮಾಡಿದೆ. 'ಸೊಸೆ ತಂದ ಸೌಭಾಗ್ಯ'ಕ್ಕೆ ಅವಕಾಶವೂ ಸಿಕ್ಕಿತು. ಅದೇ ನನ್ನ ವೃತ್ತಿ ಬದುಕಾಗಿ ಆರಂಭವಾಯಿತು. ಡಾನ್ಸ್ ಮುಂದುವರಿಸಲು ಆಗಲಿಲ್ಲ ಎನ್ನುವ ಸಣ್ಣ ಕೊರಗು ಈಗಲೂ ಇದೆ.

◆ **ಕಥೆ– ಪಾತ್ರ ಯಾವುದನ್ನು ನೋಡಿ ನಟನೆಗೆ ಒಪ್ಪುತ್ತೀರಿ?**

ಸೀರಿಯಲ್‌ನಲ್ಲಿ ಕಥೆ ನೋಡಿ ಆಯ್ಕೆ ಮಾಡುವ ಸಾಧ್ಯತೆ ಕಡಿಮೆ. ಏಕೆಂದರೆ ಕಥೆ ಎನ್ನುವುದು ಹೀಗೆ ಸಾಗುತ್ತದೆ ಎಂದು ನಿರೀಕ್ಷಿಸಲು ಆಗುವುದಿಲ್ಲ. ವೀಕ್ಷಕರ ಪ್ರತಿಸ್ಪಂದನೆಗೆ ಅನುಗುಣವಾಗಿ ಅದು ತನ್ನನ್ನು ತಾನು ಸುಧಾರಿಸಿಕೊಂಡು ವಿಕಾಸವಾಗುತ್ತಾ ವಿಸ್ತರಿಸಿಕೊಳ್ಳುತ್ತದೆ. ಅದಕ್ಕೆ ಪಾತ್ರಗಳು ಸೃಷ್ಟಿಯಾಗುತ್ತಿರುತ್ತವೆ. ಇಲ್ಲವೇ ಮರೆಗೆ ಸರಿಯುತ್ತವೆ. ಹೀಗಿರುವಾಗ ಪಾತ್ರವನ್ನು ನೋಡಿಯೇ ಆಯ್ಕೆ ಮಾಡಿಕೊಳ್ಳುತ್ತೇವೆ.

'ಸೇವಂತಿ'ಯಲ್ಲಿ ವಕೀಲನ ಪಾತ್ರ. ವಿವಾದಾತೀತ ವ್ಯಕ್ತಿತ್ವ ಅವನದು. ವಿಶಿಷ್ಟ ಗುಣ ಅವನಿಗೆ, ಪ್ರೀತಿ– ಪ್ರಣಯದ ಬಗ್ಗೆ ಆಸಕ್ತಿಯೇ ಇಲ್ಲ. ಮದುವೆ ಆಗಬೇಕು ಎನ್ನುವ ಬಯಕೆ ಕೂಡ ಅವನಿಗೆ ಇಲ್ಲ. ಇದನ್ನು ನಾನು ಪಾತ್ರವನ್ನು ನೋಡಿಯೇ ಆಯ್ಕೆ ಮಾಡಿಕೊಂಡಿದ್ದು. ಇದನ್ನು ಒಪ್ಪಲು ಬಹುಮುಖ್ಯ ಮತ್ತೊಂದು ಕಾರಣ ಎಂದರೆ, ಭಾರತಿ ವಿಷ್ಣುವರ್ಧನ್ ಅವರ ಜೊತೆ ನಟಿಸುವ ಭಾಗ್ಯ. ನಾನು ಅಣ್ಣೋರನ್ನು ನೋಡೇ ಇಲ್ಲ. ವಿಷ್ಣು ಸರ್ ಅವರನ್ನು ಎರಡು ಬಾರಿ ನೋಡಿದ್ದರೂ ಒಡನಾಟ ಇಲ್ಲ. ಅಂತಹ ದೊಡ್ಡ ನಟರ ಜೊತೆ ನಟಿಸಿದ್ದ ಖ್ಯಾತ ನಟಿ ಜೊತೆ ನಟಿಸುತ್ತೇನೆ ಎನ್ನುವ ಹೆಬ್ಬಯಕೆ ನಟಿಸಲು ಪ್ರೇರಣೆಯಾಗಿತ್ತು. ಭಾರತೀಯಮ್ಮ ಕೂಡ ರಾಜ್ ಜೊತೆ ನಟಿಸಿದ್ದ ಅನುಭವ, ವಿಷ್ಣು ಸರ್ ಸೇರಿದಂತೆ ಚಿತ್ರರಂಗದ ಬಗ್ಗೆ ತುಂಬ ಸಂಗತಿಯನ್ನು ಹೇಳಿದ್ದಾರೆ.

◆ **ಮುಂದಿನ ಹೆಜ್ಜೆಗಳ ಬಗ್ಗೆ ಹೇಗೆ ಯೋಚಿಸಿದ್ದೀರಿ?**

ಇತ್ತೀಚೆಗೆ ನಾನು ನಟಿಸಿದ 'ಬಿಲ್‌ಗೇಟ್ಸ್' ಸಿನಿಮಾ ಬಿಡುಗಡೆಯಾಗಿತ್ತು. ಕೊರೊನಾ ಪೂರ್ವದಲ್ಲಿ ಅದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅದಾದ ಮೇಲೆ ಒಂದಿಷ್ಟು ಸಿನಿಮಾಗಳಿಗೆ ಅವಕಾಶ ಬಂದಿವೆ. ಅವುಗಳಲ್ಲಿ ನಾಲ್ಕಾರು ಕಥೆಯನ್ನು ಕೇಳಿ ಒಂದೆರಡನ್ನು ಆಯ್ಕೆ ಮಾಡಿಕೊಂಡಿದ್ದೇನೆ. 'ಅಲೆವ ಮೋಡ' ಎನ್ನುವ ಸಿನಿಮಾ ಅದ್ದೂರಿಯಾಗಿ ನಿರ್ಮಾಣವಾಗಿದೆ. ದೊಡ್ಡ ಬಜೆಟ್ ಸಿನಿಮಾವನ್ನು ಮನೋಮೂರ್ತಿ ನಿರ್ಮಿಸಿದ್ದು ಅವರೇ ಸಂಗೀತವನ್ನೂ ನೀಡಿದ್ದಾರೆ. ಅದು ಬಿಡುಗಡೆ ಮಾಡಬೇಕು ಎನ್ನುವ ಹೊತ್ತಿಗೆ ಲಾಕ್‌ಡೌನ್ ಜಾರಿಯಾಯಿತು. ಈಗ ಅದು ತೆರೆಕಾಣಲು ಅವಕಾಶದ ಹವಣಿಕೆಯಲ್ಲಿದೆ. ಸದ್ಯ ಸೇವಂತಿ ಜೊತೆ 'ಪ್ರೇಮಲೋಕ' ಧಾರಾವಾಹಿಯಲ್ಲಿ ನಟಿಸುತ್ತಿದ್ದೇನೆ. ಮನೋರಂಜನಾ ಕ್ಷೇತ್ರದಲ್ಲಿಯೇ ನನ್ನ ಪಯಣ ಸಾಗುತ್ತದೆ.

◆ **ಸೆಲೆಬ್ರಿಟಿಯಾಗಿ ಸಾಮಾಜಿಕ ಹೊಣೆಗಾರಿಕೆ ಹೇಗೆ ನಿಭಾಯಿಸುತ್ತೀರಿ?**

ಕಿರುತೆರೆಯ ಕಲಾವಿದರು ಸೆಲೆಬ್ರಿಟಿ ಎನ್ನುವುದಕ್ಕಿಂತ ವೀಕ್ಷಕರ ಮನೆ ಮಕ್ಕಳಂತೆ ಆಗಿರುತ್ತೇವೆ. ಜನ ಮಾತನಾಡಿಸುವ ರೀತಿ ನೀತಿ ಕೂಡ ಹಾಗೆಯೇ ಇರುತ್ತದೆ. ಅವರ ಮಾತಿನಲ್ಲಿ ಅಷ್ಟು ಸಲಿಗೆ ಇರುತ್ತದೆ ಎನ್ನುವುದನ್ನು ನಾನು ಗುರುತಿಸಿದ್ದೇನೆ. ಸಿನಿಮಾ ಸೆಲೆಬ್ರಿಟಿಗಳಿಗಿಂತ ಟೀವಿ ಸೆಲೆಬ್ರಿಟಿಗಳಿಗೆ ಪ್ರೀತಿ ಹೆಚ್ಚು ಸಿಗುತ್ತದೆ. ಆದರೆ ಕಿರುತೆರೆಯ ನಟರ ಸಿನಿಮಾವನ್ನು ನೋಡಲು ಅಷ್ಟು ಇಷ್ಟಪಡುವುದಿಲ್ಲ ಎಂದು ವೈಯಕ್ತಿಕವಾಗಿ ಅನ್ನಿಸುತ್ತದೆ. ಅದನ್ನು ಮೀರಲು ಒಳ್ಳೆಯ ಕಥೆ ಹಾಗೂ ಉತ್ತಮ ಅಭಿನಯ ಮಾಡಬೇಕಾಗುತ್ತದೆ.

ಸಾಮಾಜಿಕ ಜವಾಬ್ದಾರಿ ಬಂದಾಗ ಕೆಲವು ಜಾಗೃತಿ ಯೋಜನೆಯಲ್ಲಿ ಭಾಗವಹಿಸುತ್ತೇನೆ. ಕೊರೊನಾ ಸಂದರ್ಭದಲ್ಲಿ ಬೆಂಗಳೂರು ನಗರ ಪೊಲೀಸ್ ಪೇಜ್‌ಗೆ ಬೈಟ್ಸ್ ಕೊಡುತ್ತಿದ್ದೆ. ಈಗ ಚಿತ್ರೀಕರಣದಲ್ಲಿ ತೊಡಗಿದ್ದೇವೆ. ಇಂತಹ ಸಂದರ್ಭ ಬಂದಾಗ ಸಾಮಾಜಿಕ ಜವಾಬ್ದಾರಿಯನ್ನು ಮರೆತು ಬಿಡ್ತೀವಾ? ಎನ್ನುವ ಪ್ರಶ್ನೆ ಸಹಜವಾಗಿ ಏಳುತ್ತದೆ. ಅವೆರಡನ್ನೂ ಸರಿದೂಗಿಸಿಕೊಂಡು ಹೋಗುವುದು ನಮ್ಮ ಹೊಣೆಗಾರಿಕೆ ಆಗಬೇಕು ಎನ್ನುವುದು ನನ್ನ ಆಶಯ.

◆ **ಬೆಳ್ಳಿತೆರೆ– ಕಿರುತೆರೆಯ ನಡುವಿನ ವ್ಯತ್ಯಾಸಗಳು ಏನು?**

ಇವೆರಡರ ನಡುವೆ ಸಾಮ್ಯತೆ ಖಂಡಿತ ಇಲ್ಲ. ತುಂಬ ವ್ಯತ್ಯಾಸ ಇದೆ ಎಂದೆನಿಸುತ್ತದೆ. ತಾಂತ್ರಿಕ ವ್ಯತ್ಯಾಸವನ್ನು ಹೊರತುಪಡಿಸಿ ಒಬ್ಬ ನಟನಾಗಿ ಹೇಳುವುದಾದರೆ, ಧಾರಾವಾಹಿಯಲ್ಲಿ ಒಂದು ಪಾತ್ರವನ್ನು ನಿರ್ವಹಿಸುತ್ತಿದ್ದರೆ ಆ ಪಾತ್ರವೇ ನಾವಾಗಿ ಬಿಡುತ್ತೇವೆ. ಆಗ ಅದಕ್ಕಾಗಿ ಹೆಚ್ಚಿನ ತಯಾರಿ ಬೇಕೆನಿಸುವುದಿಲ್ಲ. ಚಿತ್ರೀಕರಣದ ಸಂದರ್ಭದಲ್ಲಿ ಸ್ಕ್ರಿಪ್ಟ್ ಸಿಕ್ಕ ತಕ್ಷಣ ರೆಡಿಯಾಗುತ್ತೇವೆ. ಸಿನಿಮಾದಲ್ಲಿ ಹಾಗೆ ಆಗುವುದಿಲ್ಲ. ಅದರ ಆಂಗಿಕ ಭಾಷೆ– ಉಚ್ಚರಣೆ ಎಲ್ಲದಕ್ಕೂ ಒಂದಿಷ್ಟು ಕಸರತ್ತು ಮಾಡಬೇಕಾಗುತ್ತದೆ. ಬೆಳ್ಳಿತೆರೆಯಲ್ಲಿ ಹೇಳಿದಂತೆ ಡೈಲಾಗ್ ನಿಧಾನಕ್ಕೆ ಹೇಳುವಂತಿಲ್ಲ. ಅವಧಿಯ ಚೌಕಟ್ಟಿನಲ್ಲಿ ಡೈಲಾಗ್ ಮುಗಿಯಬೇಕಾಗುತ್ತದೆ. ಆರಂಭದಲ್ಲಿ ನಾನು ಆರಾಮಾಗಿ ಡೈಲಾಗ್ ಹೇಳುತ್ತಿದ್ದೆ. ಅದನ್ನು ನಟ ಚಿಕ್ಕಣ್ಣ ಗುರುತಿಸಿ ಸರಿಪಡಿಸಿದರು. ತುಂಬ ಕ್ವಿಕ್ ಆಗಿ ಸಿನಿಮಾದಲ್ಲಿ ರಿಯ್ಯಾಕ್ಟ್ ಮಾಡಬೇಕಾಗುತ್ತದೆ.

◆ **ತಾಂತ್ರಿಕವಾಗಿ ನಿಮ್ಮನ್ನು ಗುರುತಿಸಿಕೊಳ್ಳುವ ಸಾಧ್ಯತೆ ಬಗ್ಗೆ ಹೇಳಿ...**

ಮೂರನೇ ಧಾರಾವಾಹಿ 'ಭಾರತಿ' ಮೂವತ್ತು ಕಂತುಗಳನ್ನು ನಿರ್ದೇಶನ ಮಾಡಿದ್ದೆ. ಆರಂಭದಿಂದಲೂ ನಾನು ಸಂಕಲನ ಮಾಡುವಾಗ ಭಾಗಿಯಾಗುತ್ತಿದ್ದೆ. ನಟನೆಯ ಜೊತೆ ಸಂಕಲನ ಸಹಾಯಕನಾಗಿಯೂ ಕೆಲಸ ಮಾಡಿದೆ. ಅಲ್ಲಿ ಡಬ್ಬಿಂಗ್ ಮಾಡುವುದನ್ನು ಕಲಿಯುತ್ತಿದ್ದೆ. ಪುಟ್ಟಗೌರಿ ಮದುವೆಯಲ್ಲಿ ಸಹನಿರ್ದೇಶಕನಾಗಿಯೂ ಕೆಲಸ ಮಾಡಿದ್ದೆ. ಸಿನಿಮಾವನ್ನು ನಾನೇ ಬರೆದು ನಿರ್ದೇಶನ ಮಾಡಬೇಕು ಎನ್ನುವ ಕನಸು ಇದೆ.

**■ ರಾಘವೇಂದ್ರ ಕೆ.**